# 3- ವೇ
# ಕಾರ್ಡಿಂಗ್ ಫುಟ್




## ಈ ಟ್ಯುಟೋರಿಯಲ್ನಲ್ಲಿ ನೀವು ಉಷಾ 3 ವೇ ಕಾರ್ಡಿಂಗ್ ಫುಟ್ ಅನ್ನು ಬಳಸಲು ಕಲಿಯುತ್ತೀರಿ.







ಹೆಸರೇ ಹೇಳುವಂತೆ ಈ ಫುಟ್ ನಿಮಗೆ ಮೂರು ಉತ್ತಮ ದಾರಗಳನ್ನೂ ಒಂದೇ ಬಾರಿಗೆ ಹೊಲಿಯಲು ತಿಳಿಸುತ್ತದೆ, ಒಂದೋ ನೇರವಾಗಿ ಅಥವಾ ಅಲಂಕಾರಿಕ ಜಟಿಲ ವಿನ್ಯಾಸಗಳನ್ನು ಹೊಲಿಯುವಾಗ.

ಮೊದಲು ನಾವೀಗ ಈ ಟ್ಯುಟೋರಿಯಲ್ಗೆ ಏನೆಲ್ಲಾ ಬೇಕು ಅವುಗಳನ್ನು ಸಂಗ್ರಹಿಸೋಣ- ಹೌದು, ನಿಮಗೆ ಉಷಾ ಜಾನೊಮ್ ಕಾರ್ಡಿಂಗ್ ಫುಟ್, ದಾರಗಳು- ಒಂದೇ ಬಣ್ಣಗಳು ಅಥವಾ ವೈವಿಧ್ಯಮಯ ಬಣ್ಣಗಳು, ಹೊಲಿಯುವ ನೂಲು- ಇದು ಕೂಡ ಒಂದೇ ಬಣ್ಣದ್ದಾಗಿರಬೇಕು ಅಥವಾ, ನೀವು ವ್ಯತಿರಿಕ್ತತೆಯನ್ನು ತೋರಿಸ ಬಯಸಿದರೆ ವಿಭಿನ್ನ ಬಣ್ಣಗಳನ್ನು ಬಳಸಿ, ಮತ್ತು ಕೊನೆಯಲ್ಲಿ ಆದರೆ ಮುಖ್ಯವಾದ ಸಂಗತಿಯೆಂದರೆ ನೀವು ಮೊದಲ ಸುತ್ತಿನ ಕಾರ್ಡಿಂಗ್ ಮಾಡುವ ಒಂದು ತುಂಡು ಬಟ್ಟೆ.

ದಾರದ ಉದ್ದ ಬಟ್ಟೆಯ ಉದ್ದದ ನಾಲ್ಕರಷ್ಟಿರುವಂತೆ ಅಳತೆ ಮಾಡಿ ಮತ್ತು ಕತ್ತರಿಸಿ. ಇತರ ಎರಡು ದಾರದ ಅಳತೆಗೂ ಇದನ್ನೇ ಪಾಲಿಸಿ. ನೀವೇ ನೋಡುವಂತೆ ನಾವು ಎರಡು ಹಳದಿ ಬಣ್ಣದ ದಾರಗಳನ್ನು ಬಳಸುತ್ತಿದ್ದೇವೆ ಮತ್ತು ಒಂದು ಹಸಿರು ಬಣ್ಣದ್ದನ್ನು ಈ ಅಭ್ಯಾಸದಲ್ಲಿ ಬಳಸಿದ್ದೇವೆ.
ಹಾಗಂತ, ನೀವು 3 ವೇ ಕಾರ್ಡಿಂಗ್ ಫುಟ್ ಬಳಸಲು ಪ್ರತಿ ಬಾರಿಯೂ ಮೂರು ದಾರಗಳನ್ನು ಬಳಸಬೇಕೆಂದಿಲ್ಲ- ನಿಮಗೆ ಬೇಕಾಗಿರುವ ಪರಿಣಾಮವನ್ನು ಆಧರಿಸಿ ನೀವು ಒಂದು ಅಥವಾ ಎರಡು ದಾರಗಳನ್ನು ಒಂದೇ  ಬಾರಿಗೆ ಬಳಸಬಹುದು.

ಸಾಮಾನ್ಯವಾದ ಉಪಯೋಗಿಸುವ ಪ್ರೆಸ್ಸರ್ ಫುಟ್ನ್ನು  ಲಿವರ್ ಬಳಸಿ ಬಿಡಿ ಮತ್ತು ನಂತರ 3 ವೇ ಕಾರ್ಡಿಂಗ್ ಫುಟ್ ಜೋಡಿಸಿ.















ನಾನು ಹೇಗೆ ಕ್ಲಿಪ್ನ ಅಡಿಯಲ್ಲಿ ಮೊದಲ ದಾರವನ್ನುಸಾಗಿಸುತ್ತೇನೆ ಎಂಬುದನ್ನು ಗಮನಿಸಿ ಮತ್ತು ಅದನ್ನು ಮೊದಲ ನಳಿಗೆಯ ಕೆಳಗಿಂದ ತನ್ನಿ. ನಳಿಗೆಯೊಳಗೆ ನುಸುಳಿಸಲು ನೀವದನ್ನು ಹಗುರವಾಗಿ ಎಳೆಯಬೇಕಾಗಬಹುದು… ಇದನ್ನೇ ಎರಡು ಮತ್ತು ಮೂರನೇ ದಾರಗಳಿಗೂ ಪುನರಾವರ್ತಿಸಿ. ಮೂರೂ ದಾರಗಳಿಗೂ ಸಮನಾದ ಉದ್ದವಿದೆ ಎಂಬುದನ್ನು ನೋಡಿಕೊಳ್ಳಿ, ಫುಟ್ನ ಹಿಂಬದಿ ಅದು ಒಂದೆರಡು ಇಂಚ್ಗಳಿರಬಹುದು, ಈ ರೀತಿ.

ಈಗ ಫುಟ್ ಬಳಕೆಗೆ ಸಿದ್ಧವಾಗಿದೆ…ಆದರೆ ನೀವು ಹೊಲಿಯಲು ಆರಂಭಿಸುವ ಮುನ್ನ ನಿಮ್ಮ ಯಂತ್ರವನ್ನು ಸಿದ್ಧಪಡಿಸಿಕೊಳ್ಳಿ. ಪ್ಯಾಟರ್ನ್ ಸೆಲೆಕ್ಟರ್ ಡಯಲ್ನಲ್ಲಿ 'ಡಿ' ಸ್ಟಿಚ್ ಆರಿಸಿ ಮತ್ತು ಹೊಲಿಗೆಯ ಉದ್ದ 2 ಇರಲಿ.

ನಂತರ ಬಟ್ಟೆಯ ತುಂಡನ್ನು ಕಾರ್ಡಿಂಗ್ ಫುಟ್ನ ಕೆಳಗಿಡಿ, ಮತ್ತು ಫುಟ್ನ್ನು ಕೆಳಗೆ ತನ್ನಿ. ಹೊಲಿಯುವ ಆತುರದಲ್ಲಿ ತಾಳ್ಮೆ ಕಳೆದುಹೋಗುತ್ತಿದೆಯಲ್ಲವೇ?? ಈಗ ಇದನ್ನು ಹೊಲಿಯಲು ಆರಂಭಿಸುವ ಸಮಯ. ಇನ್ನೊಂದು ತುದಿಯನ್ನು ನೀವು ತಲುಪಿದಾಗ, ಸ್ವಲ್ಪ ಹೆಚ್ಚನ್ನು ಬಿಡಿ ಮತ್ತು ಉಳಿದದ್ದನ್ನು ಕತ್ತರಿಸಿ.

ಇದು ಬೇಸಿಕ್ ಕಾರ್ಡಿಂಗ್- ನಿಮ್ಮ ಕಾರ್ಡಿಂಗ್ ವಿಧಾನಗಳನ್ನು ಮತ್ತಷ್ಟು ಎದ್ದುಕಾಣುವಂತೆ ಮಾಡಲು ನೀವು ವಿವಿಧ ಹೊಲಿಗೆಗಳನ್ನು ಅನ್ವೇಷಿಸಲು ಪ್ರಾರಂಭಿಸಬಹುದು. ಇಲ್ಲಿ ಮತ್ತೊಂದನ್ನು ಮಾಡೋಣ….

ಡಯಲ್‌ಅನ್ನು ಸ್ಟ್ರೆಚ್ ಸ್ಟಿಚ್ ಗೆ ಅಥವಾ ಎಸ್‌ಎಸ್ ಮಾರ್ಕಿಂಗ್ಗೆ ತಿರುಗಿಸಿ ಮತ್ತು ಹೊಲಿಗೆ ಡಿ ಯನ್ನು ಆಯ್ಕೆಮಾಡಿ.

ಫುಟ್ನ ಕೆಳಗೆ ನಿಮ್ಮ ಬಟ್ಟೆಯನ್ನು ಇರಿಸಿ ಮತ್ತು ಮೊದಲಿನಂತೆ ಹೊಲಿಯಲು ಪ್ರಾರಂಭಿಸಿ, ಆದರೆ ಈಗ ಬೇರೆ ವಿಧದ ಹೊಲಿಗೆಯೊಂದಿಗೆ. ಒಮ್ಮೆ ಮಾಡಿಯಾದರೆ, ವಿಸ್ತರಿಸಿದ ಕಾರ್ಡ್ಗಳ ಸ್ವಲ್ಪ ಹೆಚ್ಚುಗಳ ತುದಿಯನ್ನು ಕತ್ತರಿಸಿ.

ಕರವಸ್ತ್ರದಿಂದ ಕುಶನ್ ಕವರ್ವರೆಗೆ, ಉಡುಪಿನವರೆಗೆ- ಯಾವುದಕ್ಕೂ ಕಾರ್ಡಿಂಗ್ ವಿನ್ಯಾಸ ಅಂಶದಂತೆ ಉತ್ತಮ 3-ಡಿ ವೈಶಿಷ್ಟತೆಯನ್ನು ನೀಡುತ್ತದೆ- ಉತ್ತಮವಾಗಿ ಬಳಸಿದರೆ ಇದು ಅವುಗಳಿಗೆ ರಚನಾತ್ಮಕ ಪರಿಣಾಮವನ್ನು ಸೇರಿಸುತ್ತದೆ. ಈ ಪಾಠವನ್ನು ನೀವು ಇಷ್ಟಪಟ್ಟಿದ್ದೀರಿ ಎಂದು ನಂಬಿದ್ದೇನೆ- ನೀವು ಹೊಂದಿರುವ ಎಲ್ಲಾ ಸರಳ ಬಟ್ಟೆಗಳನ್ನು ಹೊರಗೆಳೆಯಿರಿ ಮತ್ತು ಅವುಗಳನ್ನು ಅಲಂಕರಿಸಿ…ನಿಮ್ಮ ಬಟ್ಟೆಗಳ ಮೂಲರೂಪ ಮತ್ತು ಏಕತಾನತೆಯನ್ನು ನೀವು ಬಯಸುವುದಾದರೆ- ಒಂದೇ ರೀತಿಯ ಬಣ್ಣದ ಹಗ್ಗಗಳೊಂದಿಗೆ ಎದ್ದುಕಾಣುವಂತೆ ಮಾಡುವುದಕ್ಕಿಂತ ಉತ್ತಮವಾಗಿ ಯಾವುದೂ ಕೆಲಸ ಮಾಡುವುದಿಲ್ಲ- ಇದರ ಸೊಬಗು ವೈಯಕ್ತಿಕವಾದುದು. ಮತ್ತು ಯಾರು ಹೃದಯದಲ್ಲಿ ಅಸಂಪ್ರದಾಯಕರಾಗಿರುತ್ತಾರೋ ಅವರಿಗೆ- ಸ್ವಂತ ಹೇಳಿಕೆಯನ್ನು ಒಟ್ಟುಗೂಡಿಸಲು ಆ ಸುಂದರವಾದ ಬಣ್ಣಗಳು ಮತ್ತು ದಪ್ಪ ವ್ಯತಿರಿಕ್ತವಾದುದನ್ನು ಆಯ್ಕೆ ಮಾಡಿ.

ಇದು ಸಂತೋಷದ ಸಮಯ…. ಹ್ಯಾಪೀ ಕಾರ್ಡಿಂಗ್!